ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನದು ಒಂದು ಮನವಿ ಇದೆ. ಇಲ್ಲೇ ಅಲ್ಲ, ಇಡೀ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಕೇಂದ್ರಗಳಲ್ಲಿ ತಾವು ದಯವಿಟ್ಟು ಕೆಳಗಿನಿಂದ ಹಿಡಿದು ಮೇಲಿನವರೆಗೆ ಒಂದೇ ಜಾತಿಯವರನ್ನು ಹಾಕಲು ಹೋಗಬೇಡಿ. ಡಿಐಜಿನೂ ಅದೇ ಕಮ್ಯುನಿಟಿ, ಎಸ್‌ಪಿ ನೂ ಅದೇ ಕಮ್ಯುನಿಟಿ, ಡಿ ವೈ ಎಸ್ ಪಿ ನೂ ಅದೇ ಕಮ್ಯೂನಿಟಿ, ಸರ್ಕಲ್ ಇನ್ಸ್‌ಪೆಕ್ಟರೂ ಅದೇ ಕಮ್ಯೂನಿಟಿ ಮತ್ತು ಸಬ್ ಇನ್ಸ್‌ಪೆಕ್ಟರ್ ಸಹಾ ಇದೇ ಕಮ್ಯುನಿಟಿ. ಈ ರೀತಿಯಾದರೆ ಹೇಗೆ? ನ್ಯಾಯ ನೀತಿ ಏನೂ ಇಲ್ಲವೇ? ಈ ರೀತಿ ಆಗಬಾರದು ಎಂದೇನೂ ಇಲ್ಲ. ಅನಿರೀಕ್ಷಿತವಾಗಿ ಎಲ್ಲೋ ಒಂದು ಕಡೆ ರೀತಿಯಾಗಿದೆ ಎಂದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಗೊತ್ತಿದ್ದೂ ಕೂಡ ಇಂಥ ಸೆನ್‌ಸಿಟೀವ್ ಪ್ಲೇಸ್‌ಗಳಲ್ಲಿ ಲೈನಾಗಿ ಒಂದೇ ಕಮ್ಯುನಿಟಿಯವರನ್ನೇ ಹಾಕಿದರೆ ಇದು ನಿಮ್ಮ ಆಡಳಿತಕ್ಕೆ ಶೋಭೆ ತರುತ್ತದೆಯೇ? ಕಳ್ಳತನವಾದಂಥ ಸಾಮಾನುಗಳ ರೆಕವರಿ ಏಕೆ ಆಗುತ್ತಿಲ್ಲ ಎಂದರೆ ಇಲ್ಲಿ ಒಬ್ಬರಿಗೊಬ್ಬರಿಗೆ ಲಿಂಕ್ ಇದೆ. ಹೊಡೆದವನೂ ಅವನೇ, ಅಲ್ಲಿ ಎನ್‌ಕ್ವೈರಿ ಮಾಡುವವನೂ ಅವನೇ, ಅವನ ಮೇಲಿನವರಿಗೆ ಕಂಪ್ಲೇಂಟ್ ಕೊಟ್ಟರೆ ಅವನೂ ಅದೇ ಕಮ್ಯುನಿಟಿಯವನೇ ಮತ್ತೆ ಅವನ ಮೇಲಿನವರಿಗೆ ಕಂಪ್ಲೇಂಟ್ ಕೊಟ್ಟರೆ ಅವನೂ ಅದೇ ಕಮ್ಯುನಿಟಿಯವನು.

ಈ ಹಿಂದೆ ತಮಗೂ ಗೊತ್ತಿದೆ ದೇವರಾಜ ಅರಸ್‌ರವರ ಕಾಲದಲ್ಲಾಗಲಿ, ಹಿಂದೆ ಯಾವ ಗವರ್ನಮೆಂಟ್ ಕಾಲದಲ್ಲೂ, ಹೆಗಡೆಯವರು ಇದ್ದಾಗ ಕೂಡ ನಮ್ಮ ಸರ್ಕಾರ ಇದ್ದಾಗ ಕೂಡ ವ್ಯತ್ಯಾಸ ಮಾಡಿದ್ದೆವು. ಎಸ್.ಪಿ. ಒಬ್ಬರು ಇದ್ದರೆ, ಡಿಸಿ ಒಬ್ಬರು ಅಥವಾ ಡಿವೈಎಸ್‌ಪಿ ಒಂದು ಕಮ್ಯುನಿಟಿಯವರು ಇದ್ದರೆ ಸರ್ಕಲ್ ಇನ್‌ಸ್ಪೆಕ್ಟರ್ ಇನ್ನೊಂದು ಕಮ್ಯುನಿಟಿಯವರು. ಹೀಗೆ ಹೆಚ್ಚು ಕಡಿಮೆ ಅಡ್ಮಿನಿಸ್ಟ್ರೇಷನ್‌ನಲ್ಲಿ ನ್ಯಾಯ ಸಿಗಲಿ ಎನ್ನತಕ್ಕಂತಹ ದೃಷ್ಟಿಯಿಂದ ಎಲ್ಲಾ ಜನರಿಗೆ ಮಿಕ್ಸ್ ಮಾಡಿ ಹಾಕುತ್ತೇವೆ. ನೀವು ಶಾಸಕರ ಒತ್ತಡಕ್ಕೆ, ಮಂತ್ರಿಗಳ ಒತ್ತಡಕ್ಕೆ ಎಲ್ಲಾ ಸಾರಾಸಗಟು ಒಂದು ಕಡೆ ಹಾಕುತ್ತಿರಿ. ನಾವು ಎಲ್ಲಿ ಹೋಗಿ ನ್ಯಾಯ ಕೇಳಬೇಕು, ಕಾಲು ಕಡಿಯುವವರೂ ಇವರೆ, ಕೈ ಕಡಿಯುವವರೂ ಇವರೇ. ಬೇಲ್ ಮೇಲೆ ಬಿಡಿಸಿಕೊಂಡು ಬರುವವರೂ ಇವರೇ. It is very unfortunate.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಸಭಾಧ್ಯಕ್ಷರೆ, ಕೆಲವು ಐಟಂ ರೆಕವರ್ ಆಗಿದೆ, ಇನ್ನು ಕೆಲವು ಆದಷ್ಟು ಬೇಗ ರೆಕವರ್ ಮಾಡುತ್ತೇವೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಆಶ್ವಾಸನೆ ಕೊಡುತ್ತೇನೆ. ಒಂದೇ ಜನಾಂಗದವರು ಒಂದು ಕಡೆ ಇರಬಾರದು ಎಂದು ಹೇಳುತ್ತಿದ್ದಾರೆ I totally agree with him. Any Government worth of its name, should not do it. ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಸರ್ಕಾರ ಯಾವುದೂ ಇರಬಾರದು, ಈ ಒಂದು ಜಿಲ್ಲೆಯಲ್ಲಿ ಈ ತರಹ ಆಗಿದೆ, ಈ ಬಾರಿಯ ವರ್ಗಾವಣೆಯಲ್ಲಿ ನಾವು ಅದನ್ನು ಸರಿಪಡಿಸುತ್ತೇವೆ.

ಬಸ್‌ಪ್ರಯಾಣ ದರ ಹೆಚ್ಚು ಮಾಡಿದ ಸಂದರ್ಭದಲ್ಲಿ ಹಾಕಿರುವ ಕೇಸ್‌ಗಳನ್ನು ವಾಪಸ್ಸು ತೆಗೆದುಕೊಳ್ಳುವ ಬಗ್ಗೆ

ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ) : ಸನ್ಮಾನ್ಯ ಉಪಾಧ್ಯಕ್ಷರೆ, ಇಂದಿಗೆ ಒಂದು ವರ್ಷದ ಹಿಂದೆ 1997ರ ಮಾರ್ಚ್ ತಿಂಗಳಲ್ಲಿ ಬಸ್ ಪ್ರಯಾಣ ದರವನ್ನು ಹೆಚ್ಚು ಮಾಡಿದಂತಹ

ಸಂದರ್ಭದಲ್ಲಿ ರಾಜ್ಯದ ಜನತೆ ತೀವ್ರವಾಗಿ ಪ್ರತಿಭಟನೆ ಮಾಡಿದರು. ಆ ಸಂದರ್ಭದಲ್ಲಿ ಪ್ರತಿಭಟನಾಕಾರರನ್ನು ಸರ್ಕಾರ, ಪೋಲಿಸರು ಹಿಡಿದು ಕೇಸ್ ಮಾಡಿ ಅವರನ್ನು ಕೋರ್ಟಿಗೆ ಕಳುಹಿಸಿದರು. ಈ ಸಂದರ್ಭದಲ್ಲಿ ಸಾಕಷ್ಟು ಸಂಘ ಸ್ಥಂಸ್ಥೆಗಳ ಪದಾಧಿಕಾರಿಗಳು, ವ್ಯವಹಾರಸ್ಥರು ಹಾಗೂ ಗೌರವಾನ್ವಿತರು ಸಹಿತ ಆ ಒಂದು ಪ್ರತಿಭಟನೆಯಲ್ಲಿ ಭಾಗವಹಿಸಿದ್ದು ಇದೆ. ಆದರೆ ಮುಂದೆ ದಿನಾಂಕ20.3.97ರಂದು ಸದನದಲ್ಲಿ ವಿರೋಧ ಪಕ್ಷಗಳ ಜೊತೆ ಚರ್ಚೆ ಆದ ನಂತರ ಬಸ್ ದರ ನಿಗದಿಯಾಯಿತು. ನಿಗಧಿಯಾದ ಸಂದರ್ಭದಲ್ಲಿ ನಾವು ಏನು ಧರಣಿ ಮಾಡಿದ್ದೇವೆ ಅದನ್ನು ಹಿಂದೆ ತೆಗೆಯುವ ಸಂದರ್ಭದಲ್ಲಿ ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮಾತನಾಡಿ ಇದೇ ಸಂದರ್ಭದಲ್ಲಿ ಪ್ರತಿಭಟನಾಕಾರರ ಮೇಲೆ ಹಾಕಿದ್ದ ಕೇಸ್ ವಾಪಸ್ ತೆಗೆದುಕೊಳ್ಳ ಬೇಕೆಂದು ಮುಖ್ಯ ಮಂತ್ರಿಗಳಿಗೆ ಮನವಿ ಸಹಿತ ಮಾಡಿದರು. ಅಂದೇ ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತು ಸನ್ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಹೇಳಿದ ಮಾತು ಸತ್ಯ. ನಾವು ಅದನ್ನು ಮಾಡುತ್ತೇವೆ, ಕ್ರಮ ಕೈಗೊಳ್ಳುತ್ತೇವೆಂದು ಹೇಳಿದರು. ಆದರೆ ಇಲ್ಲಿ ಅಂದಾಜು ಒಂದು ಎಂಟು ತಿಂಗಳವರೆಗೆ ಯಾವ ಪ್ರಕ್ರಿಯೆ ಸಹಿತ ನಡೆಯಲಿಲ್ಲ. ದಿನಾಂಕ 27.8.97ರಂದು ನಾನೇ ಸ್ವತಃ ಈ ಸದನ ನಡೆಯುವ ಸಂದರ್ಭದಲ್ಲಿ ಶೂನ್ಯ ವೇಳೆಯಲ್ಲಿ ಅವಕಾಶ ತೆಗೆದುಕೊಂಡು ಈ ವಿಷಯವನ್ನು ಪ್ರಸ್ತಾಪ ಮಾಡಿ ಕೇಸನ್ನು ವಾಪಸ್ ಪಡೆಯಬೇಕು, ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ನಿಲುವು ಮತ್ತು ಮಾತನಾಡಿದ ಕಾಪಿಗಳನ್ನು ಕೊಟ್ಟು ಅದನ್ನು ಸಹಿತ ಹೇಳಿದೆ. ಆ ಸಂದರ್ಭದಲ್ಲಿ ಉತ್ತರ ನೀಡಿದ ನಮ್ಮ ಕಾನೂನು ಸಚಿವರಾದ ಮಾನ್ಯ ನಾಣಯ್ಯನವರು ಉತ್ತರ ಹೇಳಿ ಬೇರೆ ಬೇರೆ ಕಡೆಗಳಲ್ಲಿ ಸ್ವತಃ ನಾವು ಕೇಸನ್ನು ವಾಪಸ್ ತೆಗೆದುಕೊಂಡಿದ್ದು ಇದೆ, ಇದನ್ನು ಸಹಿತ ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳುತ್ತಾರೆ,.. ಕೋಲಾರ ಜಿಲ್ಲೆ ಹಾಲಿನ ಬೆಲೆ ಏರಿಕೆ ಬಗ್ಗೆ ಬಹಳ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ನಡೆದಿದ್ದು, ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದವರು ಈ ರೀತಿಯಾಗಿ ಪ್ರತಿಭಟನೆ ವಿಕೋಪಕ್ಕೆ ಹೋಗುವುದು, ಅದನ್ನು ಹಿಂದಕ್ಕೆ ತೆಗೆದುಕೊಳ್ಳುವ ಕ್ರಮ ಮಾಡಿದ್ದೇವೆ ಅನ್ನುವ ಮಾತನ್ನು ಹೇಳಿದ್ದಾರೆ. ಆದರೆ ಈವರೆಗೆ ಕೂಡ ಈ ಕೇಸನ್ನು ಹಿಂದೆ ತೆಗೆದುಕೊಳ್ಳುವ ಬಗ್ಗೆ ಸರ್ಕಾರ ಯಾವ ರೀತಿಯಾಗಿ ಪ್ರಯತ್ನ ಮಾಡಿಲ್ಲ ಮತ್ತು ಇದರ ಬಗ್ಗೆ ಚಿಂತನೆ ಸಹಿತ ಆಗಿಲ್ಲವೆನ್ನುವ ವಿಚಾರ ಕಂಡು ಬಂದಿದೆ. ನಾವು ಹೊಸ ಸದಸ್ಯರು ಈ ಸದನದಲ್ಲಿ ಇಲ್ಲಿ ಬಂದಾಗ ಇಲ್ಲಿ ಮಂತ್ರಿ ಮಹೋದಯರು ಹೇಳಿದ ಮಾತು ಸತ್ಯ, ಅದು ನಡೆಯುತ್ತದೆ ಎಂದು ಎನ್ನುವ ವಿಚಾರವನ್ನು ನಾವು ಇಟ್ಟು ಕೊಂಡಿದ್ದೇವೆ. ಮುಂದೆ ಈ ರೀತಿಯಾಗಿ ಒಂದು ವರ್ಷದ ಅವಧಿ ಕಳೆದರೂ ಸಹಿತ ಯಾವುದೇ ಪ್ರಕ್ರಿಯೆ ನಡೆಯಲಿಲ್ಲ ಅಂದರೆ ನಮಗೆ ಬಹುಶಃ ಭ್ರಮನಿರಸನವಾಗುತ್ತಿದೆ. ಸರ್ಕಾರದ ಪರವಾಗಿ ಸರಿಯಾದ ಉತ್ತರ ಕೊಡಬೇಕು, ಅಥವಾ ಆಗುವುದಿಲ್ಲ ನೀವು ಕೇಸ್ ತೆಗೆದುಕೊಳ್ಳುವುದಿಲ್ಲ ಎಂದರೆ ನಾವು ನಮ್ಮ ಮತ ಕ್ಷೇತ್ರದ ಜನತೆಗೆ ತಿಳಿಸುತ್ತೇವೆ, ಸರ್ಕಾರ ಮಾತು ಕೊಟ್ಟಿತ್ತು, ಈಗ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಅನ್ನುವ ಮಾತನ್ನು ಆದರೂ ಹೇಳುತ್ತಾರೆ. ಪದೇ ಪದೇ ನಾವು ಸಾಮಾನ್ಯ ಜನರ ಮುಂದೆ, ಸಾಮಾನ್ಯ ಜನತೆಗೆಯ ನಿಂದನೆಗೆ ನಾವು ಒಳಗಾಗುವುದು ಸರಿಯಲ್ಲ. ಕಾರಣವಾಗಿ ಸರಿಯಾದ ಉತ್ತರ ಸರ್ಕಾರ ಕೊಡಬೇಕೆಂದು ತಮ್ಮ ಮೂಲಕ ಆಗ್ರಹಪಡಿಸುತ್ತೇನೆ.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಉಪ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ರಾಜಶೇಖರ ಶೀಲವಂತರವರು ಕೇಸಸ್ ವಿತ್‌ಡ್ರಾ ಮಾಡಿಲ್ಲ, ಮಾನ್ಯ ಮುಖ್ಯ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರು ಎಂದು ಹೇಳಿದ್ದಾರೆ. ನಾಳೆ ನಾಡಿದ್ದು ಅವರು ನಮ್ಮ ಛೇಂಬರ್‌ಗೆ ಬಂದು ಯಾವ ಯಾವ ಕೇಸ್‌ಗಳೆಂದು ಡೀಟೇಲ್ಸ್ ಕೊಟ್ಟರೆ ನಾನು ಕರೆದು ಮತ್ತೆ ರೀ ಎಕ್ಸಾಮಿನ್ ಮಾಡಿ ಆ ಕೇಸ್ ವಾಪಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ಪಾಲಿಸಿ ಏನೆಂದರೆ, ಯಾವ ರಾಜಕೀಯ ಪಕ್ಷದವರಾಗಲಿ, ಪೀಸ್‌ಫುಲ್ ಡೆಮಾನ್‌ಸ್ಟ್ರೇಷನ್ ಎಲ್ಲಿ ಮಾಡಿರುತ್ತಾರೆ ಅಂತಹ ಕೇಸ್‌ಗಳನ್ನು ವಿತ್‌ಡ್ರಾ ಮಾಡಬಹುದು ಎಂದು ನಾವು ಕೂಡ ಒಂದು ಪಾಲಿಸಿ ಮಾಡಿಕೊಂಡಿದ್ದೇವೆ. ಅದೇ ರೀತಿ ಇವರ ಜೊತೆ ಚರ್ಚೆ ಮಾಡಿ ಏನು ಎಕ್ಸಾಮಿನ್ ಮಾಡಬೇಕು ಅದನ್ನು ಮಾಡುತ್ತೇನೆ.

ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟ ಗಾಯಗಳ ಯೂನಿಟ್‌ಗೆ ಹೆಚ್ಚಿನ ಸೌಲಭ್ಯದ ಬಗ್ಗೆ

ಡಾ|| ಎ.ಬಿ. ಮಲಕರೆಡ್ಡಿ (ಯಾದಗಿರಿ) : ಸನ್ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ಮೆಡಿಕಲ್ ಕಾಲೇಜಿಗೆ ಹೊಂದಿಕೊಂಡಂತೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸುಟ್ಟ ಗಾಯಗಳ ಒಂದು ಯೂನಿಟ್ ಇದೆ. ಸುಮಾರು ಆರು ತಿಂಗಳಿಂದ ಇದರ ಬಗ್ಗೆ ಚಳುವಳಿ ನಡೆಯುತ್ತಿದೆ. ಹೋದ ಸದನದಲ್ಲಿ ಕೂಡ ಸನ್ಮಾನ್ಯ ಪ್ರತಿ ಪಕ್ಷದ ಧುರೀಣರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರೂ ಕೂಡ ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ. ಆದರೆ, ಇಲ್ಲಿ ನಡೆಯುತ್ತಿರುವ ಇಲಾಜು ತೃಪ್ತಿಕರವಾಗಿಲ್ಲ, ಸಮರ್ಪಕವಾಗಿಲ್ಲದ ಕಾರಣ ವಿಮೋಚನಾ ಸಂಸ್ಥೆಯವರು ಚಳುವಳಿ ನಡೆಸಿದ್ದಾರೆ. ನಾಲ್ಕು ದಿನಗಳಾಗಿವೆ. ಪೇಪರ್‌ನಲ್ಲಿ ಕೂಡ ಬಂದಿದೆ ನಮ್ಮ ಡೈರೆಕ್ಟರ್ ಕೂಡ ಹೋಗಿ ಭೇಟಿ ಆಗಿದ್ದರು. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರೂ ಕೂಡ ಚಳುವಳಿ ಮಾಡತಕ್ಕಂಥವರಿಗೆ ಭೇಟಿಯಾಗಿ ಆಶ್ವಾಸನೆ ಕೊಟ್ಟಿದ್ದಾರೆ. ಅದಕ್ಕೆ ನಾನು ವಿವರವಾಗಿ ಹೋಗುವುದಿಲ್ಲ. ಯಾವುದೇ ಒಂದು ಸಂಸ್ಥೆ ಅದು ಕೇವಲ ಒಂದು ವಾರ್ಡ್ ಅಲ್ಲ, ಒಂದು ಯೂನಿಟ್, ಅದನ್ನು ಮೇಲ್ದರ್ಜೆಗೆ ಏರಿಸಿದ್ದಾರೆ. ಒಂದು ಯೂನಿಟ್‌ನಲ್ಲಿ ಒಬ್ಬ ಪ್ರೊಫೆಸರ್ ಇರುತ್ತಾರೆ, ಅಸಿಸ್ಟೆಂಟ್ ಪ್ರೊಫೆಸರ್ ಇರುತ್ತಾರೆ. ಇಂತಹ ಒಂದು ದೊಡ್ಡ ಮಟ್ಟದ ಯೂನಿಟ್ ರಚನೆ ಮಾಡಿ ಅಲ್ಲ ಕಡಿಮೆ ಗುಣಮಟ್ಟದ ಇಲಾಜು ಮಾಡುತ್ತಿದ್ದರೆ ಜನರು ಸರ್ಕಾರದ ಬಗ್ಗೆ ಏನೆಂದು ವಿಚಾರ ಮಾಡಬೇಕು, ಅಲ್ಲಿ ಅಲ್ಲಿ ಸ್ಯಾಂಕ್ಷನ್ ಆಗಿರುವ ಪೋಸ್ಟ್‌ಗಳು, ಎರಡು ಪ್ರೊಫೆಸರ್ ಇದ್ದರೆ, ಒಬ್ಬರು ಪ್ರೊಫೆಸರ್ ಇದ್ದಾರೆ. ಮತ್ತು ಐದು ಜನ ಲೆಕ್ಚರರ್ಸ್ ಕೆಲಸ ಮಾಡುತ್ತಿದ್ದಾರೆ. ಇಬ್ಬರು ಲೆಕ್ಚರರ್ಸ್ ಪೂರ್ಣ ಪ್ರಮಾಣದ ಲೆಕ್ಚರರ್ಸ್ ಅಲ್ಲ, ಒಂಬಿಡಿ ಮೇಲೆ ಅಸಿಸ್ಟೆಂಟ್ ಸರ್ಜನನ್ನು ತೆಗೆದುಕೊಂಡು ನೇಮಕ ಮಾಡಿದ್ದಾರೆ. ಅಲ್ಲಿ ಮಾಡತಕ್ಕಂತಹ ಚಿಕಿತ್ಸೆ ಕೆಳ ಮಟ್ಟದ ಚಿಕಿತ್ಸೆ. ಅದಕ್ಕಾಗಿ ಜನರು ಆಗಾಗ್ಗೆ ಚಳುವಳಿ ಮಾಡುತ್ತಿದ್ದಾರೆ. ಅಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲ, ಅಕಾಮಡೇಷನ್ ಇಲ್ಲ, ದಿನಾ ಏಳೆಂಟು ಪೇಶೆಂಟ್ ಅಡ್ಮಿಷನ್ ಆಗುತ್ತಿದ್ದಾರೆ. ಒಂದು ಸಾರಿ ಸುಟ್ಟ ಗಾಯಗಳಿಂದ ಪೇಶೆಂಟ್ ಅಡ್ಮಿಟ್ ಆದರೆ, ಕನಿಷ್ಟ ಪಕ್ಷ 15-20 ದಿನ ಅಥವಾ ಒಂದು ತಿಂಗಳಾದರೂ ಕೂಡ ಅಲ್ಲಿ ಉಳಿಯಬೇಕಾಗುತ್ತದೆ. ಅಲ್ಲಿ ಬೆಡ್ಸ್ ಇರುವುದು ಕೇವಲ 50 ಮಾತ್ರ. ದಿನಾ ಏಳೆಂಟು ಜನ ಅಡ್ಮಿಟ್ ಆಗುತ್ತಿದ್ದಾರೆ. ಹೀಗಾಗಿ ಅಕಾಮಡೇಷನ್ ಸಾಕಷ್ಟು ಇಲ್ಲ. ಮತ್ತು